# 28/02/2013 ರಂದು ಅಪರ ಆಯುಕ್ತರು (ಚುನಾವಣೆ) ರವರ ಅಧ್ಯಕ್ಷತೆಯಲ್ಲಿ ಸಿವಿಕ್ ಸಂಸ್ಥೆಯವರು ನೀಡಿದ ದೂರಿನ ಕುರಿತು ವಿಚಾರಣಾ ಸಭೆಯ ನಡವಳಿಗಳು.

## ಹಾಜರಿದ್ದ ಅಧಿಕಾರಿಗಳು

1. ಸಿವಿಕ್ ಸಂಸ್ಥೆಯ ಸದಸ್ಯರು
2. ಮತದಾರರ ನೋಂದಣಾಧಿಕಾರಿಗಳು
   ಸರ್ವಜ್ಞನಗರ, ಪುಲಕೇಶಿನಗರ, ಕೆ.ಆರ್.ಪುರ, ಬ್ಯಾಟರಾಯನಪುರ, ವಿಜಯನಗರ ವಿಧಾನಸಭಾ ಕ್ಷೇತ್ರ.
3. ಸಹಾಯಕ ಆಯುಕ್ತರು (ಚುನಾವಣೆ)
4. ತಹಶೀಲ್ದಾರ್ (ಚುನಾವಣೆ)
5. ಚುನಾವಣಾ ಸಿಬ್ಬಂದಿ.

ಸಿವಿಕ್ ಸಂಸ್ಥೆಯವರು ವಸತಿಯೇತರ ನಾಗರೀಕರನ್ನು ಮತದಾರರ ಪಟ್ಟಿಗೆ ನೋಂದಾಯಿಸಿಕೊಳ್ಳಲು ಅರ್ಜಿಗಳನ್ನು ತುಂಬಿಸಿ ಎಲ್ಲಾ ಅರ್ಜಿಗಳನ್ನು ಶೇಖರಿಸಿ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಛೇರಿಗೆ ನೀಡಲು ಹೋದಾಗ ಸ್ವೀಕರಿಸಲು ನಿರಾಕರಿಸಿರುವುದಾಗಿ ಮುಖ್ಯ ಚುನಾವಣಾಧಿಕಾರಿಗಳಿಗೆ ದೂರು ನೀಡಿರುತ್ತಾರೆ. ಈ ಸಂಬಂಧ ಸಿವಿಕ್ ಸಂಸ್ಥೆಯವರೊಂದಿಗೆ ಹಾಗೂ ಮತದಾರರ ನೋಂದಣಾಧಿಕಾರಿಗಳೊಡನೆ ವಿಚಾರಣೆಯನ್ನು ನಡೆಸಲಾಯಿತು.

ಸಿವಿಕ್ ಸಂಸ್ಥೆಯ ಮುಖ್ಯಸ್ಥರನ್ನು ಈ ಕುರಿತು ವಿಚಾರಿಸಲಾಗಿ, ನಾವು ಬೆಂಗಳೂರಿನ ನಗರದ ಕೊಳಚೆ ಪ್ರದೇಶದ ಜನರಿಗೆ ಎಲ್ಲಾ ನಾಗರೀಕರಂತೆ ಇವರಿಗೂ ಸರ್ಕಾರದ ಎಲ್ಲಾ ಸವಲತ್ತುಗಳನ್ನು ಒದಗಿಸಿ ಕೊಡಬೇಕೆಂದು ಹೋರಾಟ ನಡೆಸುತ್ತಿದ್ದೇವೆ. ಮುಖ್ಯವಾಗಿ ಎಲ್ಲಾ ಸೌಲಭ್ಯಗಳನ್ನು ಸರ್ಕಾರದಿಂದ ಪಡೆಯಲು ಮತದಾರರ ಗುರುತಿನ ಚೀಟಿಯ ಅವಶ್ಯಕತೆ ಇರುತ್ತದೆ. ಆದ್ದರಿಂದ ಇವರನ್ನು ಮತದಾರರ ಪಟ್ಟಿಗೆ ನೋಂದಣಿ ಮಾಡುವುದು ಅವಶ್ಯವಿದ್ದು, ಈ ಸಂಬಂಧ ಮತದಾರರ ನೋಂದಣಾಧಿಕಾರಿಗಳ ಕಛೇರಿಯಲ್ಲಿ ವಿಚಾರಿಸಲಾಗಿ ವಾಸಸ್ಥಳ ದೃಢೀಕರಣ, ಹುಟ್ಟಿದ ದಿನಾಂಕದ ದಾಖಲೆ ಮತ್ತು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ವಿಲ್ಲದೇ ಮತದಾರರ ಪಟ್ಟಿಗೆ ಸೇರಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು ಹಾಗೂ ಅರ್ಜಿಗಳನ್ನು ಸ್ವೀಕರಿಸಲು ನಿರಾಕರಿಸುತ್ತಿದ್ದಾರೆ ಎಂದು ತಿಳಿಸಿದರು.

ಈ ಕುರಿತಂತೆ ಮುಖ್ಯ ಚುನಾವಣಾಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸಲಾಗಿ, ಮತದಾರರ ನೋಂದಣಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ಈ ಕುರಿತು ನಿರ್ಧರಿಸಿ, ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಸಾಧ್ಯವಿದೆ ಎಂಬ ವಿಷಯವನ್ನು ಮತದಾರರ ಪಟ್ಟಿ ನೋಂದಣಾಧಿಕಾರಿಗಳ ಕೈಪಿಡಿಯಲ್ಲಿಯೂ ನಮೂದಾಗಿದ್ದು, ಭಾರತ ಚುನಾವಣಾ ಆಯೋಗದ ಕಛೇರಿಯ ಪತ್ರದಲ್ಲಿಯೂ ಈ ಕುರಿತಂತೆ ಹೊರಡಿಸಿದ ಆದೇಶಸಂಖ್ಯೆ:30/207/ಪಿಎಲ್‌ಎನ್–11/ ದಿನಾಂಕ: 24/03/2007ರ ಪತ್ರದಲ್ಲಿ,

ಮತದಾರರ ಪಟ್ಟಿಯಲ್ಲಿ ನೋಂದಾಯಿಸಿ ಕೊಳ್ಳಲು ಮುಖ್ಯವಾಗಿ 1st ಜನವರಿ, 2013 ರಂದು, 18 ವರ್ಷ ತುಂಬಿರಬೇಕು. ವ್ಯಕ್ತಿಯು ನಿರಾಶ್ರಿತನಾಗಿದ್ದರೂ ಯಾವ ಸ್ಥಳದಲ್ಲಿ ಪ್ರತೀ ದಿನವೂ ರಾತ್ರಿ ತಂಗುವ ಪ್ರದೇಶಕ್ಕೆ ಸಂಬಂಧಿಸಿದ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಅರ್ಹನಾಗಿರುತ್ತಾನೆ. **ಸ್ಥಳ ಬದಲಾವಣೆ ಮಾಡದೇ ಒಂದೇ ಸ್ಥಳದಲ್ಲಿ ತಂಗುವವರನ್ನು ಗುರುತಿಸಿ,** ಮತದಾರರ ಪಟ್ಟಿಯಲ್ಲಿ ಸೇರಿಸಿಕೊಳ್ಳಬಹುದು ಎಂದು ತಿಳಿಸಿದೆ. ಇದರಂತೆ ನಾವು ವಸತಿರಹಿತ ಜನರನ್ನು ಗುರುತಿಸಿ ಮತದಾರರ ಪಟ್ಟಿಗೆ ಸೇರಿಸುವ ಕಾರ್ಯ ಮಾಡುತ್ತಿದ್ದು, ಅರ್ಜಿಗಳನ್ನು ಸ್ವೀಕರಿಸಲು ತಿಳಿಸಬೇಕೆಂದು ಕೋರಿದರು.

ಅಪರ ಆಯುಕ್ತರು ಚುನಾವಣೆ ಇವರು ನಿರಾಶ್ರಿತರ ಅರ್ಜಿಗಳನ್ನು ಹಾಜರಿದ್ದ ಮತದಾರರ ನೋಂದಣಾಧಿಕಾರಿಗಳಿಗೆ, ಪರಿಶೀಲಿಸಿ **ಸ್ಥಳ ಪರಿಶೀಲನೆ ನಡೆಸಿ ಕ್ರಮ ವಹಿಸುವಂತೆ** ತಿಳಿಸಿದರು.

ಮುಂದುವರೆದಂತೆ ಸಿವಿಕ್ ಸಂಸ್ಥೆಯವರು ಅರ್ಜಿಗಳನ್ನು ಒಟ್ಟಾಗಿ (Bulk) ಸಲ್ಲಿಸಿದ್ದಲ್ಲಿ ಸ್ವೀಕರಿಸಲು ಆಯೋಗದ ಸೂಚನೆಯಂತೆ ಅವಕಾಶವಿರುವುದಿಲ್ಲ ಅದರ ಬದಲಾಗಿ ಅರ್ಜಿಗಳನ್ನು ತುಂಬಿಸಿ ಅರ್ಜಿದಾರರಿಂದಲೇ ಕಛೇರಿಗೆ ಸಲ್ಲಿಸಿ ಸ್ವೀಕೃತಿ ಪಡೆಯಲು ತಿಳಿಸಿದರು.

ಅರ್ಜಿಯನ್ನು ನೀಡಿದ ದಿನಾಂಕದಿಂದ ಒಂದು ತಿಂಗಳಿನ ವರೆಗೆ ಪರಿಶೀಲಿಸಿ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿ ಗುರುತಿನ ಚೀಟಿ ನೀಡಲು ಕಾನೂನಿನಲ್ಲಿ ಅವಶ್ಯಕವಿದ್ದರೂ ಸಹ ಅರ್ಜಿ ಸ್ವೀಕರಿಸಿದ ಆದಷ್ಟು ಬೇಗ ಅಂದರೆ ಒಂದು ವಾರದೊಳಗೆ ನೋಂದಾಯಿಸಲಾಗುವುದು ಎಂದು ತಿಳಿಸಿದರು.

ಅಂತಿಮವಾಗಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

ಅಪರ ಆಯುಕ್ತರು ಚುನಾವಣೆ 05/03/2013
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

D:Office staffs folders/General Letter